ಋ) 2008–09ನೇ ಸಾಲಿನಿಂದ ಅಲೆಮಾರಿ ಜನಾಂಗದ ವಿಶೇಷ ವಸತಿ ಯೋಜನೆಯನ್ನು ಕೇಂದ್ರ ಸರ್ಕಾರದ ಆರ್ಥಿಕ ನೆರವಿನೊಂದಿಗೆ ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುವುದೇ;

ಇಲ್ಲ.

ಋೂ) ಹಾಗಿದ್ದಲ್ಲಿ, ಆಗಸ್ಟ್ 15, 2008ನೇ ಸಾಲಿನಿಂದ ಸರ್ಕಾರ ಅನುಷ್ಠಾನಗೊಳಿಸುವುದೇ?

ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (428)304
ಸದಸ್ಯರ ಹೆಸರು : ಶ್ರೀ ಜಯಚಂದ್ರ ಟಿ.ಬಿ. (ಶಿರಾ)
ಉತ್ತರಿಸುವ ಸಚಿವರು : (ಶ್ರೀ ಕೆ.ಎಸ್.ಈಶ್ವರಪ್ಪ)
: ಇಂಧನ ಸಚಿವರು

****

ಅ) ತುಮಕೂರು ಜಿಲ್ಲೆ, ಶಿರಾ ಪಟ್ಟಣದಲ್ಲಿ 220 ಕೆ.ವಿ. ವಿದ್ಯುತ್ ಸ್ಥಾವರ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ; ಕೈಗಾರಿಕಾಭಿವೃದ್ಧಿಯತ್ತ ಸಾಗುತ್ತಿರುವ ಹಿನ್ನೆಲೆಯಲ್ಲಿ ವಿದ್ಯುತ್ ಸ್ಥಾವರಕ್ಕೆ ಸೂಕ್ತ ಜಾಗ ಗುರುತಿಸಲಾಗಿದೆಯೇ;

ಹೌದು, ತುಮಕೂರು ಜಿಲ್ಲೆ ಶಿರಾ ಪಟ್ಟಣದಲ್ಲಿ 220 ಕೆ.ವಿ. ವಿದ್ಯುತ್ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆ ಪ್ರಾರಂಭಿಕ ಹಂತದಲ್ಲಿದ್ದು, ಈ ಪ್ರಸ್ತಾವನೆಯನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆಗಾಗಿ ಸಲ್ಲಿಸಲಾಗಿದೆ. ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆ ದೊರೆತ ನಂತರ ಸದರಿ 220 ಕೆ.ವಿ. ವಿದ್ಯುತ್ ಕೇಂದ್ರದ ಸ್ಥಾಪನೆಗೆ ಅವಶ್ಯವಿರುವ ಸ್ಥಳವನ್ನು ಗುರುತಿಸಲು ಕ್ರಮ ಕೈಗೊಳ್ಳಲಾಗುವುದು.

ಆ) ಗ್ರಾಮಗಳಲ್ಲಿ ಹಾಗೂ ಹೊಸ ಬೀದಿಗಳಿಗೆ ಹೆಚ್ಚುವರಿ ದೀಪ ಇಲ್ಲದೇ ರೈತರು ಮತ್ತು ನಾಗರೀಕರು ಕತ್ತಲಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇಂತಹ ಪ್ರಕರಣಗಳಲ್ಲಿ ಗ್ರಾಮ ಪಂಚಾಯಿತಿಗಳಿಂದ ಹಾಗೂ ಸ್ಥಳೀಯ ಸಂಸ್ಥೆಗಳಿಂದ ವಿದ್ಯುತ್ ಸರಬರಾಜು ಕಂಪನಿಗಳಿಗೆ ದೀಪದ ಕೋರಿಕೆ ಬಂದ ಕೂಡಲೇ ವಿದ್ಯುತ್ ಸರಬರಾಜು ಕಂಪನಿಗಳು ನಿಯಮಾವಳಿಗಳನ್ನು ಅನುಸರಿಸಿ ವಿದ್ಯುತ್ ಸಂಪರ್ಕ ಒದಗಿಸುತ್ತವೆ.

ಇ) ಈ ಬಗ್ಗೆ ವಿಶೇಷ ಯೋಜನೆಯನ್ನು ರೂಪಿಸುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆಯೇ;

ಸರ್ಕಾರದ ಮುಂದೆ ಯಾವುದೇ ವಿಶೇಷ ಯೋಜನೆಯ ಪ್ರಸ್ತಾಪ ಇರುವುದಿಲ್ಲ.

ಈ) ರಾಜೀವ್ ಗಾಂಧಿ ವಿದ್ಯುದೀಕರಣದಿಂದ ರಾಜ್ಯಕ್ಕಾದ ಲಾಭವೇನು?

ರಾಜೀವ ಗಾಂಧಿ ಗ್ರಾಮೀಣ ವಿದ್ಯುದೀಕರಣದ ಮುಖ್ಯ ಉದ್ದೇಶಗಳು ಕೆಳಕಂಡಂತಿವೆ:–

1. ಎಲ್ಲಾ ಹಳ್ಳಿಗಳನ್ನು ಹಾಗೂ ಜನ ವಸತಿ ಪ್ರದೇಶಗಳನ್ನು ಕೇಂದ್ರ ಸರ್ಕಾರವು ವಿದ್ಯುದೀಕರಣದ ಬಗ್ಗೆ ಸೂಚಿಸಿರುವ ಹೊಸ ವ್ಯಾಖ್ಯಾನದ ಪ್ರಕಾರ (New definition for village electrification) ವಿದ್ಯುದೀಕರಿಸುವುದು.
2. ಗ್ರಾಮೀಣ ಪ್ರದೇಶಗಳ ಎಲ್ಲಾ ಮನೆಗಳಿಗೂ ವಿದ್ಯುತ್ ಸೌಲಭ್ಯವು ದೊರಕುವಂತೆ ಮಾಡುವುದು.
3. ಗ್ರಾಮಾಂತರ ಪ್ರದೇಶಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಆದ್ಯತೆ ಮೇರೆಗೆ ವಿದ್ಯುತ್ ಸೌಲಭ್ಯ ಒದಗಿಸುವುದು.

ರಾಜ್ಯದಲ್ಲಿ ರಾಜೀವ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯ ಅಡಿಯಲ್ಲಿ ಜೂನ್ 2008 ಅಂತ್ಯದವರೆಗೆ 47 ಹಳ್ಳಿಗಳನ್ನು ಮತ್ತು ಉಪಗ್ರಾಮಗಳು/ದಲಿತಬಸ್ತಿ/ಜನತಾ ಕಾಲೋನಿ/ ಗಿರಿಜನ ಕಾಲೋನಿಗಳೂ ಸೇರಿದಂತೆ ಒಟ್ಟು 7884 ಜನವಸತಿ ಪ್ರದೇಶಗಳನ್ನು ವಿದ್ಯುದೀಕರಿಸಲಾಗಿದೆ ಹಾಗೂ ಈಗಾಗಲೇ ವಿದ್ಯುದೀಕರಣಗೊಂಡಿರುವ 18,809 ಹಳ್ಳಿಗಳಲ್ಲಿ ಅವಶ್ಯಕತೆ ಇರುವ ಕಡೆಗಳಲ್ಲಿ ಹೆಚ್ಚುವರಿ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಿ ವಿದ್ಯುದೀಕರಣವನ್ನು ತೀವ್ರಗೊಳಿಸಲಾಗಿದೆ. ಅಲ್ಲದೇ, ಗ್ರಾಮೀಣ ಪ್ರದೇಶಗಳಲ್ಲಿರುವ ಒಟ್ಟು 4,87,300 ಮನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಇವುಗಳ ಪೈಕಿ 4,20,300 ಮನೆಗಳಿಗೆ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಸೇರಿವೆ.

ಈ ಯೋಜನೆಯ ಅಡಿಯಲ್ಲಿ ಇದುವರೆವಿಗೂ 484.83 ಕೋಟಿ ರೂ.ಗಳು ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿದ್ದು, ಒಟ್ಟು 495.53 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ. ಈ ಯೋಜನೆಯ ಅತ್ಯಂತ ಪ್ರಮುಖ ಪ್ರಯೋಜನವೆಂದರೆ ಶೇ.90 ರಷ್ಟು ಹಣ ಅನುದಾನದ ರೂಪದಲ್ಲಿ ಕೇಂದ್ರ ಸರ್ಕಾರದಿಂದ ಲಭ್ಯವಾಗುತ್ತಿದೆ. ಉಳಿದ ಶೇಕಡ 10 ರಷ್ಟು ಹಣ ಮಾತ್ರ ಸಾಲವಾಗಿರುತ್ತದೆ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (470)305
2) ಸದಸ್ಯರ ಹೆಸರು : ಶ್ರೀ ಕರಡಿ ಸಂಗಣ್ಣ ಅಮರಪ್ಪ
3) ಉತ್ತರಿಸುವ ಸಚಿವರು : (ಶ್ರೀ ರೇವು ನಾಯಕ್ ಬಿಳಮಗಿ)
: ಮಾನ್ಯ ಪಶುಸಂಗೋಪನೆ ಸಚಿವರು.

ಅ) ಕೊಪ್ಪಳ ಜಿಲ್ಲೆಯಲ್ಲಿ ನಿರ್ಮಾಣವಾಗಿರುವ ಕೋಳಿ ಫಾರ್ಮ್‌ಗಳ ಸಂಖ್ಯೆ ಎಷ್ಟು ಹಾಗೂ ಹೊಸದಾಗಿ ಆಗುತ್ತಿರುವ ಕೋಳಿ ಫಾರ್ಮ್‌ಗಳ ಸಂಖ್ಯೆ ಎಷ್ಟು?